ಕಾರ್ಯ ನಿರ್ವಹಣೆ ಸಮಸ್ಯೆಗಳಿಗೆಲ್ಲಾ ಕಳೆದ ಮೂರು ದಶಕಗಳಲ್ಲಿ ವ್ಯಾಪಕವಾಗಿ ಬೆಳೆದು ಬಂದ ವಿತರಣಾ ವ್ಯವಸ್ಥೆಯೇ ಕೇಂದ್ರ ಬಿಂದುವೆಂದು ಸರ್ಕಾರಕ್ಕೆ ಮನದಟ್ಟಿದೆ, ಆದ್ದರಿಂದ ವಿತರಣಾ ವ್ಯವಸ್ಥೆಯನ್ನು ಕೂಲಂಕುಶವಾಗಿ ಗಮನಿಸಿ, ಬೇರ್ಪಡಿಸಿ, ಸಣ್ಣ ಸಣ್ಣ ಪ್ರಾದೇಶಿಕ ಕಂಪನಿಗಳಿಗಾಗಿ ವಿಂಗಡಿಸಿರುವುದರಿಂದ ಈ ಕಂಪನಿಗಳು ಗ್ರಾಹಕರಿಗೆ ಬಹಳ ಸಮೀಪದಲ್ಲಿದ್ದು ಅವರ ಸಮಸ್ಯೆಗಳನ್ನು ನಿವಾರಿಸುವಲ್ಲಿ ಹಾಗೂ ಒಳ್ಳೆಯ ಆಡಳಿತವನ್ನು ಒದಗಿಸುವುಲ್ಲಿ ಯಶಸ್ವಿಯಾಗಬಹುದೆಂದು ನಿರೀಕ್ಷಿಸಲಾಗಿದೆ.

ರಾಜ್ಯದ ವಿದ್ಯುತ್ ಉತ್ಪಾದನೆಯಲ್ಲಿ ತೊಂದರೆ

1563(2000) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದಿನ ಮೂರು ವರ್ಷಗಳಲ್ಲಿ ಜಲದಿಂದ, ವಿಂಡ್ ಮಿಲ್‌ಗಳಿಂದ, ಥರ್ಮಲ್ ಹಾಗೂ ಇತರ ಯಾವ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ; (ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ರಾಯಚೂರು ಥರ್ಮಲ್ ವಿದ್ಯುತ್ ಘಟಕದಲ್ಲಿ ಅನೇಕ ವಿಧದ ದೋಷಗಳಿಂದ ವಿದ್ಯುತ್ ಉತ್ಪಾದನೆಯಲ್ಲಿ ಆತಂಕ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದರಿಂದ ವಿದ್ಯುತ್ ಕೊರತೆಯ ಪ್ರಮಾಣವೆಷ್ಟು ಹಾಗೂ ವೆಚ್ಚ ಮಾಡಲಾದ ಹಣ ಎಷ್ಟು; (ವಿವರ ನೀಡುವುದು)

ಈ) ಇಂತಹ ದೋಷಗಳಿಗೆ ಕಾರಣರಾದವರ ವಿರುದ್ಧ ಕೈಗೊಂಡ ಕ್ರಮಗಳೇನು ಹಾಗೂ ಈ ಅನಾಹುತಗಳನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಮುಂಜಾಗ್ರತೆ ಕ್ರಮಗಳೇನು; (ವಿವರ ನೀಡುವುದು)?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿನ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಯ ಸ್ಥಾಪಿತ ಸಾಮರ್ಥ್ಯವು ಕೆಳಕಂಡಂತಿದೆ : (ಮೆ.ವ್ಯಾ.ಗಳಲ್ಲಿ)

	1999-00	2000-01	2001-02
ಜಲ	2715	2901.02	3007
ಪವನಶಕ್ತಿ	33.6	36.6	68.00
ಶಾಖೋತ್ಪನ್ನ	1260	1260	1260
ಸಹ ವಿದ್ಯುತ್	89.5	109	166

ಆ) ಕೆಲವು ಅಸಹಜ ಕಾರಣಗಳನ್ನು ಹೊಂದಿದ್ದರೂ ಸಹ ಆರ್‌ಟಿಪಿಎಸ್‌ನ ಉತ್ಪಾದನೆ ಕಳೆದ ಮೂರು ವರ್ಷಗಳಲ್ಲಿ ಅತ್ಯಧಿಕವಾಗಿದೆ.

1999-2000	7762	ಮೆ.ವ್ಯಾ.
2000-2001	8904	ಮೆ.ವ್ಯಾ.
2001-2002	8954	ಮೆ.ವ್ಯಾ.

ಆರ್‌ಟಿಪಿಎಸ್ ಕೇಂದ್ರಕ್ಕೆ ಉತ್ತಮ ನಿರ್ವಹಣೆಗಾಗಿ ವಿದ್ಯುತ್ ಪ್ರಾಧಿಕಾರದಿಂದ 1999-2000ರಲ್ಲಿ ರಜತ ಪದಕ ಮತ್ತು 22.82 ಲಕ್ಷ ಕ್ಯಾಶ್ ....

ಇ) 1999-2000, 2000-2001 ಮತ್ತು 2001-02 ರಲ್ಲಿ ಕಾರ್ಯನಿರ್ವಹಣಾ ಸಾಮರ್ಥ್ಯವು ಅನುಕ್ರಮವಾಗಿ ಶೇಕಡ 81.56, ಶೇಕಡ 80.67 ಮತ್ತು ಶೇಕಡ 81.12 ರಷ್ಟು ಇತ್ತು. ರಾಷ್ಟ್ರೀಯ ಸರಾಸರಿಯು ಶೇಕಡ 70 ಆಗಿರುತ್ತದೆ. ಆದುದರಿಂದ ಆರ್‌ಟಿಪಿಎಸ್ ಕೇಂದ್ರವು ರಾಷ್ಟ್ರೀಯ ಸರಾಸರಿಗಿಂತ ಉತ್ತಮವಾಗಿ ಕಾರ್ಯನಿರ್ವಹಣೆ ನಡೆಸಿದೆ.

ಮೇಲಿನ ಸಮಸ್ಯೆಗಳನ್ನು ಸರಿಮಾಡಲು ಈ ಕೆಳಕಂಡಂತೆ ಖರ್ಚಾಗಿದೆ.

1) 3ನೇ ಘಟಕದ ರೋಟರ್ ಅರ್ಥ್‌ದೋಷ - 30.00 ಲಕ್ಷಗಳು

2) 5ನೇ ಘಟಕದ ಜನರೇಟರ್ ಟ್ರಾನ್ಸ್‌ಫಾರ್ಮರ್‌ನ ಬದಲಾವಣೆ - ವಿಮೆ ಕಂಪೆನಿಯವರು ವಿಮೆ ಕ್ಲೈಮ್‌ನ್ನು ಕೊಡಲು ನಿರ್ಧಾರ ಮಾಡಿರುತ್ತಾರೆ. - 6.20 ಕೋಟಿಗಳು

3) 5ನೇ ಘಟಕದ ಹೆಚ್‌ಟಿ ಬುಷಿಂಗ್‌ನ ಬದಲಾವಣೆ - 1.03 ಕೋಟಿ

ಬೇರೆ ವಿದ್ಯುತ್ ಕೇಂದ್ರಗಳು ಸಹ ಈ ತರಹದ ಸಮಸ್ಯೆಯನ್ನು ಎದುರಿಸಿದೆ.

ಈ) ಈ ಕೆಳಕಂಡಂತೆ ಹೇಳಿರುವ ಆಧಾರಗಳ ಮೇಲೆ ಒಬ್ಬ ಅಧಿಕಾರಿಯ ಮೇಲೆ ಪೂರ್ಣ ಜವಬ್ದಾರಿಯನ್ನು ಹೊರೆಸರಾಗುವುದಿಲ್ಲ.

1) 3ನೇ ಘಟಕ ಮತ್ತ 5ನೇ ಘಟಕದ ನಿಲುಗಡೆಯು ಅನುಕ್ರಮವಾಗಿ ರೋಟರ್ ಅರ್ಥ್ ದೋಷ ಮತ್ತು 5ನೇ ಘಟಕದ ಬೆಂಕಿ ಅನಾಹುತದಿಂದ ಆಗಿರುತ್ತದೆ.

2. 5ನೇ ಘಟಕದ ಜನರೇಟರ್ ಟ್ರಾನ್ಸ್‌ಫಾರ್ಮರ್ ಸಮಸ್ಯೆಯು ಹೆಚ್‌ಟಿ ಬುಷಿಂಗ್‌ನ ವಿಫಲತೆಯಿಂದ ಆಗಿದೆಯೆಂದು ಉನ್ನತಮಟ್ಟದ ಸಮಿತಿಯು ಹೇಳಿದೆ.

ಬೇರೆ ವಿದ್ಯುತ್ ಕೇಂದ್ರಗಳಲ್ಲಿ ಬಳಕೆ ಮಾಡುವಂತೆ ಮತ್ತು ಉನ್ನತ ಮಟ್ಟದ ಸಮಿತಿಯ ಸಲಹೆಗಳನ್ನು ಅನುಷ್ಟಾನ ಮಾಡಲು ಈ ಕೆಳಕಂಡ ಸಲಹೆಗಳನ್ನು ತೆಗೆದುಕೊಳ್ಳಲಾಗಿದೆ.

1) ಇನ್ನು ಮುಂದೆ ಬುಷಿಂಗ್‌ಗಳಿಗೆ ಬಿಐಎಸ್ ಸ್ಟಾ ್ಯಂಡರ್ಡ್ ಬದಲು ಐಇಸಿ ಸ್ಟಾ ್ಯಂಡರ್ಡ್‌ನ್ನು ಅನುಸರಿಸುವುದು.

2) 250 ಎಮ್‌ವಿಎ ಸ್ಪೇರ್ ಜನರೇಟರ್ ಟ್ರಾನ್ಸ್‌ಫಾರ್ಮರ್‌ನ್ನು ತರಿಸಿ ಇಟ್ಟುಕೊಳ್ಳುವುದು. (ಆರ್ಡರನ್ನು ಕೊಡಲಾಗುತ್ತಿದೆ)

3) ಸ್ಪೇರ್ ರೋಟರ್‌ನ್ನು ತರಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ಲೋಕಾಯುಕ್ತದ ಮೂಲಕ ಅಪರಾಧಿಗಳ ದಾಖಲಾತಿ

1566 (2003) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂರು ವರ್ಷದಲ್ಲಿ ರಾಜ್ಯದಲ್ಲಿ ಲೋಕಾಯುಕ್ತದ ಮೂಲಕ ಯಾವ ವರ್ಗದ ಜನರು ಅಪರಾಧಿಗಳೆಂದು ದಾಖಲಾತಿ ಮಾಡಲಾಗಿದೆ? (ವಿವರ ನೀಡುವುದು)

ಆ) ಮೇಲಿನ ಅಪರಾಧಿಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ; ಮುಖ್ಯವಾಗಿ ಆಡಳತದಲ್ಲಿ ಭ್ರಷ್ಟಾಚಾರ ಹೆಚ್ಚಾಗಿರುವ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು ಮಾಡಿದ ಗುನ್ನೆಗಳ ವಿವರ ನೀಡುವುದು; ಅವರಿಗೆ ಈವರೆಗೆ ಆಗಿರುವ ಶಿಕ್ಷೆಗಳ ವಿವರ ನೀಡುವುದು?